(ಈ) 16 ಪಟ್ಟಣಗಳಲ್ಲಿ ಕೆಲಸ ಪ್ರಾರಂಭವಾಗಿದ್ದು ಅವುಗಳ ಹೆಸರು ಈ ರೀತಿ ಇದೆ:

(1) ಬೀದರ್
(2) ರಾಣಿಬೆನ್ನೂರು
(3) ಚಿಕ್ಕಮಗಳೂರು
(4) ಗುಲ್ಬರ್ಗ
(5) ಹೊಳೆನರಸೀಪುರ
(6) ಅರಸೀಕೆರೆ
(7) ಭಟ್ಕಳ
(8) ಸಿಸಿ
(9) ಶಿವಮೊಗ್ಗ
(10) ಉಡುಪಿ
(11) ಕೊಳ್ಳೇಗಾಲ
(12) ಮಂಡ್ಯ
(13) ಚಿಂತಾಮಣಿ
(14) ಚನ್ನರಾಯಪಟ್ಟಣ
(15) ಹುಣಸೂರು
(16) ಹರಿಹರ.

ಶ್ರೀ ಎಂ. ಎಸ್. ಕೃಷ್ಣನ್.— ಸ್ವಾಮಿ, 16 ಮುನಿಸಿಪಾಲಿಟಿ ಪಟ್ಟಣಗಳಿಗೆ ಒಳಚರಂಡಿ ವ್ಯವಸ್ಥೆಯನ್ನು ಮಾಡಲಾಗಿದೆ ಎಂದು ಹೇಳಿದ್ದೀರಿ. 216 ಪಟ್ಟಣಗಳಿಗೆ ಒಳಚರಂಡಿಯ ವ್ಯವಸ್ಥೆಯನ್ನು ಮಾಡಬೇಕಾಗಿದೆ. ಅದರಲ್ಲೂ ತಾವು ಹೇಳುವುದು ಮೂರು ಪಟ್ಟಣಗಳಿಗೆ 1983–84ರಲ್ಲಿ ಮುಗಿಸಲಾಗುವುದು ಎಂದರೆ ವರ್ಷಕ್ಕೆ ಮೂರು ಮುನಿಸಿಪಾಲಿಟಿಗಳಿಗೆ ಒಳಚರಂಡಿ ವ್ಯವಸ್ಥೆಯನ್ನು ಮಾಡುವುದಾದರೆ 216 ಪಟ್ಟಣಗಳಿಗೆ ಒಳಚರಂಡಿಯ ವ್ಯವಸ್ಥೆಯನ್ನು ಮುಗಿಸಲು ಇನ್ನು ಎಷ್ಟು ವರ್ಷಗಳು ಬೇಕಾಗುತ್ತವೆ ? ತಾವು ಏನಾದರೂ ಕ್ರಾಷ್ ಪ್ರೋಗ್ರಾಮ್ ರೀತಿಯಲ್ಲಿ ತೆಗೆದುಕೊಳ್ಳುವುದಾದರೆ ಅವುಗಳನ್ನು ಬೇಗನೇ ಮುಗಿಸಬಹುದು. ಅದಕ್ಕೆ ಬೇಕಾದಂಥ ಕಾರ್ಯಕ್ರಮಗಳನ್ನು ಹಾಕಿಕೊಳ್ಳುತ್ತೀರಾ ?

ಶ್ರೀ ಎಂ. ಚಂದ್ರಶೇಖರ್.—ಈ ಪ್ರಶ್ನೆಯ ಪ್ರಕಾರ 16 ಕೆಲಸಗಳು ನಡೆಯುತ್ತಿವೆ. 16 ಕೆಲಸಗಳು ಮೂರು ವರ್ಷದಲ್ಲಿ ಕೊನೆಯಾಗುತ್ತವೆ. ಮತ್ತು 16 ಕಾರ್ಯಗತವಾಗುತ್ತಿರತಕ್ಕಂಥದ್ದು ಏನು ಇರುತ್ತದೆ ಅದು ಈ ವರ್ಷದ ಕೊನೆಯಲ್ಲಿಯೇ ಆಗಬಹುದು. ಕ್ರಾಷ್ ಪ್ರೋಗ್ರಾಮ್ ಅಂದರೆ ಸುಮಾರು 124 ಕೋಟಿ ರೂಪಾಯಿಗಳಷ್ಟು ಸಂಪನ್ಮೂಲಗಳನ್ನು ರೂಢಿಸಿಕೊಳ್ಳಬೇಕು. ಎರಡನೆಯದೇನೆಂದರೆ 216 ಪಟ್ಟಣಗಳಿಗೂ ಕೂಡ ಒಳಚರಂಡಿ ವ್ಯವಸ್ಥೆಯನ್ನು ಮಾಡಬೇಕಾದರೆ ಎರಡು ವಿಚಾರಗಳನ್ನು ನಾವು ಗಣನೆಗೆ ತೆಗೆದುಕೊಳ್ಳಬೇಕಾಗುತ್ತದೆ. ಮೊದಲನೆಯದಾಗಿ ಜನಸಂಖ್ಯೆ ಒಂದು ಲಕ್ಷಕ್ಕೂ ಹೆಚ್ಚು ಇರಬೇಕು. ಎರಡನೆಯದಾಗಿ ಒಳಚರಂಡಿಯಲ್ಲಿ ನೀರು ಸಲೀಸಾಗಿ ಹೋಗಬೇಕಾದರೆ ತಲಾ 25 ಗ್ಯಾಲನ್ ನೀರಿನ ಬಳಕೆ ಇರಬೇಕು. ಹಾಗಿದ್ದರೆ ಮಾತ್ರ ಒಳಚರಂಡಿ ವ್ಯವಸ್ಥೆ ಸರಿಯಾಗಿರುತ್ತದೆ. ಇದನ್ನೆಲ್ಲ ನೋಡಿಕೊಂಡು 216 ಪಟ್ಟಣಗಳಲ್ಲಿ ಎಷ್ಟು ಸಮರ್ಪಕವಾಗಿ ತೆಗೆದುಕೊಳ್ಳಲು ಸಾಧ್ಯವೋ ಅವುಗಳನ್ನು ತೆಗೆದುಕೊಳ್ಳಲಾಗುತ್ತದೆ. ಇವೆರಡು ವಿಚಾರಗಳಿಗೂ ಸಂಪನ್ಮೂಲಗಳನ್ನು ಕೂಡ ನೋಡಿಕೊಂಡು ಅದಷ್ಟು ಜಾಗ್ರತೆಯಾಗಿ ಒಳಚರಂಡಿಯ ವ್ಯವಸ್ಥೆಯನ್ನು ತೆಗೆದುಕೊಳ್ಳಲಾಗುತ್ತದೆ.

ಶ್ರೀ ಎಂ. ಎಸ್. ಕೃಷ್ಣನ್.— ಈಗ 16 ಪಟ್ಟಣಗಳಿಗೆ ಒಳಚರಂಡಿ ವ್ಯವಸ್ಥೆಯನ್ನು ಒದಗಿಸಿರುವಂಥ ಕಡೆಗಳಲ್ಲಿ ಅನೇಕ ಕಡೆಗಳಲ್ಲಿ ಈ ಸೌಲಭ್ಯವಿಲ್ಲದೆ ಇರುವುದು ಕಂಡುಬಂದಿರುತ್ತದೆ. ತಮಗೆ ತೋರಿಸಿಯೂ ಬಂದಿರುವುದರಿಂದ ಈ ರೀತಿ ಒಂದೆಕಡೆ ಕಾರ್ಯಕ್ರಮವನ್ನು ಹಾಕಿಕೊಂಡು ಪೂರ್ತಿ ಮಾಡದೆ ಇರತಕ್ಕಂಥ ಸಂದರ್ಭಗಳು ಇರುತ್ತವೆ. ಆದ್ದರಿಂದ ಯಾವುದೇ ಬಿಟ್ಟಿರುವುದನ್ನು ಪೂರ್ತಿ ಮುಗಿಸುವುದಕ್ಕೆ ಏನಾದರೂ ಕಾರ್ಯಕ್ರಮಗಳನ್ನು ಹಾಕಿಕೊಳ್ಳುತ್ತೀರಾ. ?

ಶ್ರೀ ಎಂ. ಚಂದ್ರಶೇಖರ್.—ಜನಸಂಖ್ಯೆ ಜಾಸ್ತಿಯಾಗುತ್ತಿದೆ ಎಂದು ಅಂದಾಜು ಮಾಡಿದಾಗ ಬಡಾವಣೆಗಳೂ ವಿಸ್ತೀರ್ಣವಾಗುತ್ತಿರುತ್ತದೆ. ಜನಸಂಖ್ಯೆ ಯಾವಾಗಲೂ ಒಂದೇ ಮಟ್ಟದಲ್ಲಿ ಇರುವುದಿಲ್ಲ. ಆದ್ದರಿಂದ ಕೆಲವಾರು ಪ್ರದೇಶಗಳಲ್ಲಿ ಈ ಯೋಜನೆಗಳು ವ್ಯವಸ್ಥೆಯಾಗದೆ ಇರಬಹುದು. ವ್ಯವಸ್ಥೆಯಾಗದೆ ಇರುವುದನ್ನು ತೆಗೆದುಕೊಳ್ಳಬೇಕಾಗುತ್ತದೆ.

ಶ್ರೀ ಎಂ. ಎಸ್. ಕೃಷ್ಣನ್. —ಈಗ ಬ್ಯಾಲೆನ್ಸ್ ನಿಂತುಹೋಗಿರತಕ್ಕಂಥವುಗಳನ್ನು ತೆಗೆದುಕೊಳ್ಳುತ್ತೀರಾ ?

ಶ್ರೀ ಎಂ. ಚಂದ್ರಶೇಖರ್.—ಈಗಾಗಲೇ ಪೂರ್ತಿಯಾಗದೆ ಇರುವ ಕೆಲಸಗಳನ್ನು ಇದ್ದರೆ ಅವುಗಳನ್ನು ಪೂರ್ಣಮಾಡುತ್ತೇವೆ.

ಚುಕ್ಕೆಪ್ರಶ್ನೆ 242 (168)

ಶ್ರೀ ಕೆ. ಹೆಚ್ ರಂಗನಾಥ್,—ಮಾನ್ಯ ಅಧ್ಯಕ್ಷರೇ, ಸಹಕಾರ ಮಂತ್ರಿಗಳು ಇಲ್ಲ.

ಅಧ್ಯಕ್ಷರು.—ಸಹಕಾರ ಮಂತ್ರಿಗಳ ಪರವಾಗಿ ಉತ್ತರ ಕೊಡಲು ಬೇರೆ ಮಂತ್ರಿಯವರು ಇದ್ದಾರೆ.

ಶ್ರೀ ಕೆ. ಹೆಚ್. ರಂಗನಾಥ್.—ಇಲ್ಲಿ ಮಂತ್ರಿಗಳು ಇಲ್ಲ. ನಾನು ಪ್ರಶ್ನೆಯನ್ನು ಕೇಳಿದರೆ ಅವರಿಗೆ ಎಂಬರಾಸಿಂಗ್ ಆಗಬಹುದು.

ಶ್ರೀ ಬಿ. ಎಲ್. ಗೌಡ.—ಮಾನ್ಯ ಸದಸ್ಯರು ಪ್ರಶ್ನೆ ಕೇಳಿದರೆ ಉತ್ತರವನ್ನು ಕೊಡುತ್ತಿದ್ದೆ.

ಶ್ರೀ ಕೆ. ಹೆಚ್. ರಂಗನಾಥ್.—ಈ ಪ್ರಶ್ನೆಯನ್ನು ಮುಂದೂಡಬೇಕೆಂದು ಕೇಳಿಕೊಳ್ಳುತ್ತೇನೆ.

ಅಧ್ಯಕ್ಷರು.—ಪ್ರಶ್ನೆಯನ್ನು ಮುಂದೂಡಲಾಗಿದೆ.

ಶ್ರೀ ಎಂ. ಚಂದ್ರಶೇಖರ್.—ಮಾನ್ಯ ಅಧ್ಯಕ್ಷರೇ, ಇದು ನನ್ನ ಖಾತೆಗೆ ಸಂಬಂಧಪಟ್ಟಂತೆ ತಪ್ಪಾಗಿ ಆಚ್ಚಾಗಿದೆ. ಇದು ಗ್ರಾಮೀಣ ಅಭಿವೃದ್ಧಿ ಮತ್ತು ಪಂಚಾಯತ್ ರಾಜ್ ಖಾತೆಗೆ ಸೇರಿದ್ದು.

ಶ್ರೀ ಎಂ. ಪಿ. ಪ್ರಕಾಶ್.—ಮಾನ್ಯ ಅಧ್ಯಕ್ಷರೇ, ಗ್ರಾಮೀಣ ಅಭಿವೃದ್ಧಿ ಮತ್ತು ಪಂಚಾಯತ್ ರಾಜ್ ಖಾತೆ ಸಚಿವರ ಪರವಾಗಿ ನಾನು ಇದಕ್ಕೆ ಉತ್ತರ ಕೊಡುತ್ತೇನೆ.

ಅಧ್ಯಕ್ಷರು.—ಆಗಬಹುದು.

ವಿಷಯ : ಕಾರದಗಾ ಹಾಗೂ ಭೋಜಗಳಲ್ಲಿ ಕುಡಿಯುವ ನೀರಿನ ಯೋಜನೆ.

ಪ್ರ. 243 (175) ಶ್ರೀ ಎ. ಎ. ನಿಂಬಾಳ್ಕರ್ (ಸಾದಲಗ).— ಮಾನ್ಯ ನಗರಾಭಿವೃದ್ಧಿ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೇ :—

(ಅ) ಸರ್ಕಾರವು ಕಾರದಗಾ ಹಾಗೂ ಭೋಜ ಗ್ರಾಮಗಳಿಗೆ ನೀರು ಸರಬರಾಜು ಯೋಜನೆಗಳನ್ನು ಕೈಗೊಳ್ಳುವುದೇ ;

(ಆ) ಈ ಯೋಜನೆಗಳನ್ನು ಮುಗಿಸಲು ಬೇಕಾಗುವ ಸಂಭವನೀಯ ಅವಧಿ ;

(ಇ) ಮಂಗಳೂರು ಹಾಗೂ ಯಡೂರು ನೀರು ಸರಬರಾಜು ಯೋಜನೆಗಳ ವಿವರಗಳು ?

ಶ್ರೀ ಎಂ. ಪಿ. ಪ್ರಕಾಶ್ (ಗ್ರಾಮೀಣ ಅಭಿವೃದ್ಧಿ ಮತ್ತು ಪಂಚಾಯತ್ ರಾಜ್ ಸಚಿವರ ಪರವಾಗಿ).—

(ಅ) ಹೌದು.

(ಆ) ಕಾರದಗಾ ಯೋಜನೆಯನ್ನು ಮುಗಿಸಲು 3 ವರ್ಷಗಳು ಹಾಗೂ ಭೋಜ ಯೋಜನೆಯನ್ನು ಮುಗಿಸಲು 2 ವರ್ಷಗಳ ಸಂಭವನೀಯ ಅವಧಿ ಬೇಕು.

(ಇ) ಯಡೂರು ನೀರು ಸರಬರಾಜು ಯೋಜನೆ: ನೇರವಾಗಿ ಪಂಪು ಮಾಡಿ ಗ್ರಾಮಕ್ಕೆ ನೀರು ಪೂರೈಕೆ ಮಾಡಲಾಗುತ್ತಿದೆ. ಉನ್ನತ ಮಟ್ಟದ ಜಲಾಶಯದ ಕೆಲಸವನ್ನು ಇನ್ನೂ ಪ್ರಾರಂಭಿಸಬೇಕಾಗಿದೆ. ಮಂಗೂರು ನೀರು ಸರಬರಾಜು ಯೋಜನೆ: ನೇರವಾಗಿ ಪಂಪು ಮಾಡಿ ಗ್ರಾಮಕ್ಕೆ ನೀರು ಪೂರೈಕೆ ಮಾಡಲಾಗುತ್ತಿದೆ. ಉನ್ನತ ಮಟ್ಟದ ಜಲಾಶಯದ ಕೆಲಸವನ್ನು ಇನ್ನೂ ಪ್ರಾರಂಭಿಸಬೇಕಾಗಿದೆ.

SRI. A. A. NIMBALKAR.—Hon'ble Speaker, Sir, may I know when will the construction work starts in Karadaga and Bhoj ?

SRI. M. P. PRAKASH.—The works will commence this year. We have allotted Rs. 1,000/- for this purpose.

[ಶ್ರೀ ಎಂ. ಮಲ್ಲಿಕಾರ್ಜುನ ಖಾರ್ಗೆ.—ತಾವು ಇದಕ್ಕೆ ಒಂದು ಸಾವಿರ ರೂಪಾಯಿಗಳನ್ನು ಕೊಟ್ಟರೆ ಹೇಗೆ ? ಇದು ಆ ಜಾಗವನ್ನು ಶುಚಿ ಮಾಡುವುದಕ್ಕೂ ಸಹ ಸಾಕಾಗುವುದಿಲ್ಲ.

(ಉತ್ತರವಿಲ್ಲ)]

ವಿಷಯ : ಚಿಕ್ಕಮಾರನಹಳ್ಳಿಯಲ್ಲಿ ಮನೆಗಳನ್ನು ಕೆಡವಿರುವುದು.

ಪ್ರ. 244 (190) ಶ್ರೀ ಪಿ. ರಾಮದೇವ್ (ಮಲ್ಲೇಶ್ವರಂ).—ಮಾನ್ಯ ನಗರಾಭಿವೃದ್ಧಿ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೇ :—

(ಅ) ಚಿಕ್ಕಮಾರನಹಳ್ಳಿಯಲ್ಲಿ ಇತ್ತೀಚೆಗೆ ಬುಲ್‌ಡೋಜರ್ಸ್ ಮೂಲಕ ಮನೆಗಳನ್ನು ಕೆಡವಲು ಕಾರಣಗಳೇನು ;

(ಆ) ಈ ಹಳ್ಳಿಯಲ್ಲಿ ಎಷ್ಟು ಮನೆಗಳನ್ನು ಕೆಡವಲಾಯಿತು :

(ಇ) ಈ ಕೆಡವಿದ ಮನೆಗಳ ಮೌಲ್ಯವೆಷ್ಟು ;

(ಈ) ಈ ಹಳ್ಳಿಯಲ್ಲಿ ಮನೆ ಕಳೆದುಕೊಂಡಿರುವವರಿಗೆ ಮತ್ತು ನಿವೇಶನಗಳನ್ನು ಕಳೆದುಕೊಂಡವರಿಗೆ ಸರಕಾರದವರು ಪರಿಹಾರ ನೀಡಲು ತೀರ್ಮಾನಿಸಿದ್ದಾರೆಯೇ ?

ಶ್ರೀ ಎಂ. ಚಂದ್ರಶೇಖರ್ (ಮಾನ್ಯ ನಗರಾಭಿವೃದ್ಧಿ ಮತ್ತು ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರದ ಮಂತ್ರಿಗಳು).—

(ಅ) ಚಿಕ್ಕಮಾರನಹಳ್ಳಿ–ಮತ್ತೀಕೆರೆ ಗ್ರಾಮದಲ್ಲಿ ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರವು ನಿವೇಶನಗಳನ್ನು ಹಂಚಲು ಭೂಸ್ವಾಧೀನಪಡಿಸಿಕೊಂಡಿದೆ. ಪ್ರಾಧಿಕಾರದ ಆಸ್ತಿಯಲ್ಲಿ ಹಲವಾರು ಮಂದಿ ಅನಧಿಕೃತವಾಗಿ ಮನೆಗಳನ್ನು ಕಟ್ಟಿದ್ದುದರಿಂದ ಅನಧಿಕೃತ ಕಟ್ಟಡಗಳನ್ನು ತೆಗೆಯಲು ಕಾನೂನು ಮೇರೆಗೆ ಕ್ರಮ ಕೈಗೊಳ್ಳಲಾಯಿತು.

(ಆ) 74 ಮನೆಗಳನ್ನು ಕೆಡವಲಾಯಿತು.

(ಇ) ಮೌಲ್ಯವನ್ನು ಅಂದಾಜು ಮಾಡಿರುವುದಿಲ್ಲ.

(ಈ) ಅಧಿಸೂಚನೆಗೊಳಪಟ್ಟ ಪ್ರದೇಶದಲ್ಲಿ ಕಟ್ಟಡಗಳನ್ನು ಕಟ್ಟಿರುವ ಜನರು ಅತಿಕ್ರಮಣಗಾರರಾಗಿರುವುದರಿಂದ ಪರಿಹಾರ ಕೊಡುವ ಪ್ರಶ್ನೆ ಉದ್ಭವಿಸುವುದಿಲ್ಲ.